# ಮಧುಚಂದ್ರದ ಬೆನ್ನಿಗೆ ದಾಂಪತ್ಯದ ಅಗ್ನಿದಿವ್ಯ



ಹುಡುಗಿಯೊಬ್ಬಳು ತನ್ನ ಪಕ್ಕದಲ್ಲಿ ಕುಳಿತ, ಬಹುಶಃ ಅವಳ ಬಾಯ್‌ಫ್ರೆಂಡ್ ಆಗಿದ್ದ ಯುವಕನನ್ನು ಕೇಳಿದಳು, 'ಆಸ್ಕರ್, ನೀನು ಸಹ ನನಗಾಗಿ ಹೀಗೇನಾದರೂ ಮಾಡಬಲ್ಲೆಯಾ?'

ಆ ಹುಡುಗನಿಗೆ ಉತ್ತರ ಹೊಳೆಯದೆ ಅವನು ನನ್ನೆಡೆಗೆ ಸಂಜ್ಞೆ ಮಾಡುತ್ತಾ ಹೇಳಿದ, 'ಆದರೆ ಇವರ ಪ್ರೇಯಸಿ ಸತ್ತಿದ್ದಾಳೆ... ನೀನಿನ್ನೂ ಬದುಕಿದ್ದೀಯ...' ಎಲ್ಲರೂ ಕಿಲಕಿಲನೆ ನಕ್ಕರು.

ಬೇರೊಬ್ಬ ಯುವಕ ನನಗೆ ಹೇಳಿದ, 'ಅವನು ಡಿಆರ್ಟೂ– ಟೀವಿ ಚಾನಲ್‌ನ ವರದಿಗಾರ. ಅವನಿಗೆ ಮೀಡಿಯಾದೊಂದಿಗೆ ಒಳ್ಳೆಯ ಸಂಪರ್ಕವಿದೆ. ಅವನು ನಿಮ್ಮ ಇಂಟರ್‌ವ್ಯೂ ತೆಗೆದುಕೊಳ್ಳಲು ಬಯಸುತ್ತಾನೆ'. ಅವನು ಕೂಡಲೇ ನನ್ನ ಸಂದರ್ಶನವನ್ನೂ ತೆಗೆದುಕೊಂಡ. ನನ್ನ ಪ್ರಯಾಣದ ನಕ್ಷೆ, ತೀರ್ಥಯಾತ್ರೆಯ ಫೋಟೊ ಸಹ ತೆಗೆದುಕೊಂಡು, ವಿಭಿನ್ನ ಕೋನಗಳಿಂದ ಶೀರ್ಷಿಕೆಯನ್ನು ಹೈಲೈಟ್ ಮಾಡಿದ.

ನಾನು ರೆಸ್ಟೋರೆಂಟಿನಿಂದ ಎದ್ದು ನನ್ನ ಮಾರ್ಗದಲ್ಲಿ ಮುಂದುವರೆದೆ. ಆ ಯುವಕ–ಯುವತಿಯರು ಕೈಯೆತ್ತಿ ಚಿಯರ್ಸ್ ಅಪ್ ಹೇಳಿದರು. ಹ್ಯಾಪಿ ಪಿಲ್‌ಗ್ರಿಮೇಜ್ ಎಂದು ಶುಭವನ್ನು ಸಹ ಹಾರೈಸಿದರು. ಅವರು ನನ್ನಲ್ಲಿ ಒಂದು ಹೊಸ ಉತ್ಸಾಹವನ್ನು ತುಂಬಿದರು. ಸಂಜೆಯ ಸಮಯ ಹಿತವೆನಿಸಿತು.

**ಹನಿಮೂನ್**

ಅಂದು ನನಗೆ ಮೊದಲ ಬಾರಿಗೆ ಜೂಲಿಯಾ ಹುಟ್ಟಿದಂದಿನಿಂದ ನಮ್ಮ ಅನುವಂಶೀಯತೆಯ ಎಳೆ ಭಾರತದೊಂದಿಗೆ ಕಲೆತಿದೆ ಎಂಬ ವಿಷಯ ತಿಳಿಯಿತು. ಆಗ ನನಗೆ ಎಂಟು ವರ್ಷ. 'ತಂಗಿ ಹುಟ್ಟಿದ್ದಾಳೆ' ಎಂದು ಅಪ್ಪ ನನಗೆ ಹೇಳಿದ್ದರು.

'ತಂಗಿ!' ನಾನು ವಿಶೇಷ ಉದ್ಗಾರವನ್ನು ವ್ಯಕ್ತಪಡಿಸಿದೆ. ಇಬ್ಬರು ಸಹೋದರರ ನಂತರ ಸಹೋದರಿಯ ಆಗಮನ ಹಿತವೆನಿಸಿತು. ಜೂಲಿಯಾಳನ್ನು ನೋಡಲು ಅಪ್ಪನೊಂದಿಗೆ ನರ್ಸಿಂಗ್ ಹೋಮ್‌ಗೆ ಹೋದೆ.

ಕೆಲವು ಗಂಟೆಗಳ ಹಿಂದೆಯಷ್ಟೇ ಜನಿಸಿದ್ದ ಜೂಲಿಯಾ, ತೊಟ್ಟಿಲಿನಲ್ಲಿ ನಿದ್ರಿಸುತ್ತಿದ್ದಳು. ಅವಳ ಕಾಂತಿಯುಕ್ತ ಕಪ್ಪು ತಲೆಗೂದಲುಗಳನ್ನು ನೋಡಿ ಆಶ್ಚರ್ಯವಾಯಿತು. ಜೂಲಿಯಾ ತನ್ನ ಎಳೆಯ ಕಣ್ಣುಗಳನ್ನು ತೆರೆದಾಗ ಎರಡು ಕಪ್ಪುಮಣಿಗಳಂತೆ ಅವಳ ಕಣ್ಣುಗಳು ಹೊಳೆದವು. ವಿಲಿಯಮ್ ಮತ್ತು ಎಲ್ಬರ್ಟ್‌ಗೆ ನೀಲಿ ಕಣ್ಣುಗಳಿದ್ದವು. ನನ್ನ ನಂತರ ಜೂಲಿಯಾ ಗಾಢ ಕಂದು ಬಣ್ಣದ ಕಣ್ಣುಗಳನ್ನು ಹೊಂದಿದ್ದಳು. ಅವಳ ಬಣ್ಣ ನನಗಿಂತ ಹೆಚ್ಚು ಮಂದವಾಗಿತ್ತು. ನಾನು ಪದೇ ಪದೇ ಅವಳ ನುಣುಪು ಕೂದಲುಗಳಲ್ಲಿ ನನ್ನ ಕೈಯಾಡಿಸುತ್ತಿದ್ದೆ.

'ಪಾಲ್' ಅಪ್ಪಾ ಹೇಳಿದರು, 'ನಿನ್ನ ಮತ್ತು ನಿನ್ನ

